ಪದಲಹರಿ

# ಕುವೆಂಪು ಪದಕಾಶಿ



**ಜಿ. ಕೃಷ್ಣಪ್ಪ**

ಕುವೆಂಪು ಮಹತ್ ಕೃತಿಗಳನ್ನಷ್ಟೇ ರಚಿಸಲಿಲ್ಲ; ಹೊಸ ಪದಗಳನ್ನೂ ಟಂಕಿಸಿದರು. ಸಹೃದಯರ ಭಾವಕೋಶವನ್ನು ಸಮೃದ್ಧಗೊಳಿಸಿದ ಕೆಲವು ವಿಶಿಷ್ಟ ಪದಗಳ ಕುರಿತು ಟಿಪ್ಪಣಿಗಳು.

ಮಹಾಕವಿ ಕುವೆಂಪು ಅವರು ಮಹಾಕಾವ್ಯ, ಭಾವಗೀತೆ, ಮಹಾಕಾದಂಬರಿ, ನಾಟಕ, ಆತ್ಮಕಥೆ, ವಿಮರ್ಶೆಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿರುವುದು ಮಾತ್ರವಲ್ಲ; ತಮ್ಮ ಕೃತಿಗಳಲ್ಲಿ ಹೊಸಪದಗಳನ್ನು ರಚಿಸಿ ಕನ್ನಡ ಶಬ್ದಕೋಶವನ್ನೂ ಹಿಗ್ಗಿಸಿದ್ದಾರೆ. ಅವರು ಸಂದರ್ಶನವೊಂದರಲ್ಲಿ 'ಸುಮಾರು ಐನೂರು ಪದಗಳನ್ನು ನಾನು ಸೃಷ್ಟಿಸಿದ್ದೇನೆ: ರಸಋಷಿ, ಹೊಂಗನಸು, ದರ್ಶನ, ಇತ್ಯಾದಿ' ಎಂದು ಹೇಳಿದ್ದಾರೆ. (ಸಮಗ್ರ ಗದ್ಯ, ಸಂಪುಟ 2, ಪುಟ 982)

ಕುವೆಂಪು 'ಕವಿಗೆ ಕರ್ಣ ಪ್ರಮಾಣಂ, ವ್ಯಾಕರಣಮಲ್ತು. ವ್ಯಾಕರಣಮೇಕೆಂಬೆಯೇಂ ಮರೆವುದಕೆ ಕಲ್ತು' ಎಂಬ ಅರಿವಿಗೆ ಒಳಗಾದವರು. ಆ ಚಿಂತನಾ ದೃಷ್ಟಿಯಲ್ಲಿ ಹೊಸ ಹೊಸ ಪದಗಳನ್ನು ನವೀನ ಅರ್ಥಗಳಲ್ಲಿ ಹೊಸೆದು ತಮ್ಮ ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಒಂದೊಂದು ನವನವೀನ ಪದ ಸೃಷ್ಟಿಯು ವಿಶಿಷ್ಟ ಸಂಯೋಜನೆಗೆ ಒಳಗಾಗಿ ವಿಶೇಷ ಭಾವಾಭಿವ್ಯಕ್ತಿಯಿಂದ ಸಹೃದಯನ ಭಾವಕೋಶವನ್ನು ವಿಸ್ತರಿಸುತ್ತದೆ. ಅವರ ಕಲ್ಪನೆಯ ಪದ ಸೃಷ್ಟಿಯು ಆಯಾ ರಸಾನುಭವ ಸಂದರ್ಭಕ್ಕೆ ತಕ್ಕಂತೆ ಬುದ್ಧಿಭಾವಗಳ ವಿದ್ಯುದಾಲಿಂಗನದಲ್ಲಿ ಮಿಂಚಿನಂತೆ ಹೊಳೆದು ಶೋಭಿಸಿದೆ. ಅವುಗಳಲ್ಲಿ ಕೆಲವು ಪದಗಳನ್ನು ಇಲ್ಲಿ ನೀಡಲಾಗಿದೆ.

## ನವೋದಯ ಕಾವ್ಯ

ಇಪ್ಪತ್ತನೆ ಶತಮಾನದ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯದಲ್ಲಿ ಉಂಟಾದ ಕ್ರಾಂತಿಯ ಪರಿಣಾಮವಾಗಿ ಸೃಷ್ಟಿಗೊಂಡ ಕಾವ್ಯವನ್ನು ಕೆಲವರು 'ರಮ್ಯಕಾವ್ಯ', 'ರೊಮ್ಯಾಂಟಿಕ್ ಕಾವ್ಯ' ಎಂದು ಕರೆಯುತ್ತಿದ್ದರು. ಹಾಗೆ ಕರೆಯಲು ಕಾರಣ, ಅದು ಇಂಗ್ಲಿಷಿನ ರೊಮ್ಯಾಂಟಿಕ್ ಪದ್ಧತಿಯನ್ನು ಅನುಸರಿಸಿದ್ದುದಾಗಿತ್ತು. ಭಾರತೀಯ ಬದುಕಿನಲ್ಲಾದ ಉತ್ಕ್ರಾಂತಿಯ ಪರಿಣಾಮವಾಗಿ ಸಾಹಿತ್ಯದಲ್ಲಿ ಉಂಟಾದ ಹೊಸತನದ ಆವಿರ್ಭಾವವನ್ನು ಸೂಕ್ಷ್ಮವಾಗಿ ಗಮನಿಸಿದ ಕುವೆಂಪು, ಅದನ್ನು 'ನವೋದಯ ಕಾವ್ಯ' ಎಂದು ಕರೆದರು. "All poetry is one, All literature is one. ನಾವು ಪ್ರಾರಂಭ ಮಾಡಿದ ಕಾಲದಲ್ಲಿ ಹಳೇಕಾಲದ ಸಂಪ್ರದಾಯ ಹೋಗ್ಬಿಟ್ಟು ಹೊಸದು ಉದಯವಾಗಿತ್ತಾದ್ದರಿಂದ 'ನವೋದಯ' ಆಯ್ತು. ಅಷ್ಟೆ" ಎಂದು ಅವರು ಒಂದು ಸಂದರ್ಶನದಲ್ಲಿ ತಿಳಿಸಿದ್ದಾರೆ. (ಸಮಗ್ರ ಗದ್ಯ, ಸಂಪುಟ-2, ಪು.1033)